ಆರಾಧನಾಕ್ರಮ
ಸಭೆಯ ಪುನಃಸ್ಥಾಪನಾ ಭಾನುವಾರ
ದೇವರ ಸಾರ್ವಭೌಮತೆ , ನ್ಯಾಯ ಮತ್ತು ಸಮಾಧಾನದ ಆಚರಣೆ

ಸಾರ್ವಭೌಮನಾದ ದೇವರ ಆರಾಧನೆಗೆ ಕರೆ : ನಮ್ಮ ಕರ್ತನಾದ ಯೇಸು ಕ್ರಿಸ್ತನು - ಇಸ್ರಾಯೇಲ್ ಜನವೇ ಕೇಳು, ನಿನ್ನ ದೇವರಾದ ಕರ್ತನು ಒಬ್ಬನೇ ದೇವರು; ನಿನ್ನ ದೇವರಾದ ಕರ್ತನನ್ನು ನಿನ್ನ ಪೂರ್ಣ ಹೃದಯದಿಂದಲೂ, ನಿನ್ನ ಪೂರ್ಣ ಪ್ರಾಣದಿಂದಲೂ, ನಿನ್ನ ಪೂರ್ಣ ಬುದ್ಧಿಯಿಂದಲೂ, ನಿನ್ನ ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು ಎಂಬುದೇ ಮೊದಲನೆಯ ಆಜ್ಞೆ.

ಆರಂಭ ಸಂಗೀತ :

ಈ ಪ್ರಾಚೀನ ಗೀತವನ್ನು ಮೂರಾವರ್ತಿ ಹೇಳುವುದು-

ಪರಿಶುದ್ಧನಾದ ದೇವರೇ:

ಪರಿಶುದ್ಧನೇ ಬಲಸ್ವರೂಪನೇ, ಪರಿಶುದ್ಧನೇ ಸದಾ ಜೀವಿಸುವಾತನೇ, ನಮ್ಮನ್ನು ಕರುಣಿಸು.

ನ್ಯಾಯ ಮತ್ತು ಸಮಾಧಾನಕ್ಕೆ ಕರೆ: ಎರಡನೆಯ ಆಜ್ಞೆ ಒಂದು ಉಂಟು. ಅದು ಯಾವುದೆಂದರೆ- ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬುದೇ. ಇವುಗಳಿಗಿಂತ ಹೆಚ್ಚಿನ ಆಜ್ಞೆ ಮತ್ತೊಂದಿಲ್ಲ. ಈ ಎರಡು ಆಜ್ಞೆಗಳು ಎಲ್ಲಾ ಧರ್ಮಶಾಸ್ತ್ರಕ್ಕೂ ಪ್ರವಾದನಾಗ್ರಂಥಕ್ಕೂ ಆಧಾರವಾಗಿವೆ.

ಪಾಪದರಿಕೆಗೆ ಕರೆ: ನಮ್ಮಲ್ಲಿ ಪಾಪವಿಲ್ಲವೆಂದು ನಾವು ಹೇಳಿದರೆ ನಮ್ಮನ್ನು ನಾವೇ ಮೋಸಪಡಿಸಿಕೊಳ್ಳುತ್ತೇವೆ, ಮತ್ತು ಸತ್ಯವೆಂಬುದು ನಮ್ಮಲ್ಲಿಲ್ಲ. ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವುದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಮಾಡುವನು.

ದೇವರ ರಾಜ್ಯವು ಸಮೀಪಿಸಿತು, ದೇವರ ಕಡೆಗೆ ತಿರುಗಿಕೊಂಡು ಸುವಾರ್ತೆಯನ್ನು ನಂಬಿರಿ.

ಪಾಪದರಿಕೆ:

ಎಲ್ಲರೂ: ಕೃಪಾಪೂರ್ಣನಾದ ತಂದೆಯೇ, ನಿನ್ನ ನಾಮದಲ್ಲಿ ಶ್ರೇಷ್ಠವಾದ ಸ್ವತಂತ್ರದಲ್ಲಿ ಸೇರಿಬಂದಿದ್ದೇವೆ. ಆದಾಗ್ಯೂ ನಮ್ಮ ನೆರೆಹೊರೆಯವರು ಸ್ವತಂತ್ರರಾಗಿಲ್ಲವೆಂದು ಒಪ್ಪಿಕೊಳ್ಳುತ್ತೇವೆ. ಅನ್ಯಾಯದೊಂದಿಗೆ ಆರಾಮವಾಗಿ ಜೀವಿಸುವ ಪ್ರವೃತ್ತಿ ನಮ್ಮದೆಂದು ನಾವು ಅರಿಕೆಮಾಡುತ್ತೇವೆ. ನಮ್ಮ ಸ್ವತಂತ್ರವನ್ನು ನಮ್ಮ ವೈಯಕ್ತಿಕ ಲಾಭಕ್ಕಾಗಿ, ಸ್ವಯಂ ಸಂರಕ್ಷಣೆಗಾಗಿ ಉಪಯೋಗಿಸುವವರು ನಾವೆಂದು ಅರಿಕೆಮಾಡುತ್ತೇವೆ. ಬಲಹೀನರಾದ, ನಿಂದನೆಗಳಿಗೊಳಗಾದ ನಮ್ಮ ನೆರೆಯವರ ಕಡೆಗೆ ನಾವು ಪರಿಜ್ಞಾನ ವಿಲ್ಲದವರೂ ನಿರಾಸಕ್ತರೂ ಆಗಿರುವೆವೆಂದು ಒಪ್ಪಿಕೊಳ್ಳುತ್ತೇವೆ. ಪ್ರಭುವಾದ ಯೇಸುವೇ, ನಮ್ಮನ್ನು ಕ್ಷಮಿಸಿ ನ್ಯಾಯಕ್ಕಾಗಿ ನಿನ್ನ ಹೃದಯವನ್ನು ಇತರರೊಂದಿಗೆ ನಾವು ಹಂಚಿಕೊಳ್ಳುವಂತೆ ನಮ್ಮನ್ನು ಮಾರ್ಪಡಿಸೆಂದು ಬೇಡಿಕೊಳ್ಳುತ್ತೇವೆ. ಆಮೆನ್.

ಪಾಪಕ್ಷಮಾಪಣೆಯ ಭರವಸೆಯ ಪ್ರಾರ್ಥನೆ:

ನಾಯಕರು: ಸರ್ವಶಕ್ತನಾದ ಮಹಾಕರುಣೆಯುಳ್ಳ ಕರ್ತನು ನಮ್ಮ ಪಾಪಗಳನ್ನೆಲ್ಲಾ ಕ್ಷಮಿಸಿ ಪರಿಹರಿಸಿ, ಬಾಳನ್ನು ತಿದ್ದಿಕೊಳ್ಳುವುದಕ್ಕೆ ಸಮಯವನ್ನೂ ಪವಿತ್ರಾತ್ಮನಿಂದಾಗುವ ಸುಪ್ರೇರಣೆಯನ್ನೂ ಆದರಣೆಯನ್ನೂ ನಮಗೆ ದಯಪಾಲಿಸಲಿ. ಆಮೆನ್.

ನಾಯಕರು: ಕರ್ತನು ನಿಮ್ಮೊಂದಿಗಿರಲಿ.

ಸಭೆ: ನಿನ್ನಾತ್ಮದೊಂದಿಗೂ ಇರಲಿ.

ನಾಯಕರು: ಪ್ರಾರ್ಥನೆ ಮಾಡೋಣ:

(ಈ ದಿನಕ್ಕೆ ನೇಮಕವಾದ ಸಂಗ್ರಹ ಪ್ರಾರ್ಥನೆ)

ಎಲ್ಲರೂ: ನ್ಯಾಯ ಹಾಗೂ ಸಮಾಧಾನದ ದೇವರೇ, ನೀನು ನೋಡುವ ಹಾಗೆ ನಾವೂ ನೋಡುವವರಾಗುವಂತೆ, ನೀನು ಕಾರ್ಯಮಾಡುವಂತೆ ನಾವೂ ಕಾರ್ಯಮಾಡುವವರಾಗುವಂತೆ ನಮ್ಮ ಮನಸ್ಸುಗಳನ್ನು ನವೀಕರಿಸುವ ನಿನ್ನ ವಾಕ್ಯಕ್ಕಾಗಿ ನಿನಗೆ ಸ್ತೋತ್ರ. ಹಿಂಸೆ, ಶೋಷಣೆ ಮತ್ತು ಅಪನಂಬಿಕೆಗಳ ಮಧ್ಯೆ ನಾವು ನಿನ್ನ ಸಂಪರ್ಕಸಾಧನಗಳಾಗುವಂತೆ ಮಾಡೆಂದು ನಿನ್ನೊಂದಿಗೂ ಪವಿತ್ರಾತ್ಮನೊಂದಿಗೂ ಕೂಡಿ ಏಕದೇವರಾಗಿ ಸದಾ ಜೀವಿಸಿ ಆಳುವ ಯೇಸು ಕ್ರಿಸ್ತನ ಮುಖಾಂತರ ಬೇಡಿಕೊಳ್ಳುತ್ತೇವೆ. ಆಮೆನ್.

ಸತ್ಯವೇದ ಪಾರಾಯಣ:

ಹಳೆ ಒಡಂಬಡಿಕೆ:ಯೆಶಾಯ 58 : 1 -14

ಪತ್ರಿಕಾ ಭಾಗ: 1ತಿಮೊಥೆಯನಿಗೆ 6 : 6 -19

ವಿಶೇಷ ಗೀತೆ / ಸಂಗೀತ

ಸುವಾರ್ತಾ ಹಾಗೇ : ಲೂಕ 16: 19 -31

ಪ್ರಸಂಗ

ವಿಶ್ವಾಸ ಸೂತ್ರದ ಅರಿಕೆ

ನೈಸಿಯದ ವಿಶ್ವಾಸ ಸೂತ್ರ :

ಸಭಾಪ್ರಕಟಣೆಗಳು

ಕಾಣಿಕೆ: ಸಂಗೀತ/ ಜ್ಞಾನಕೀರ್ತನೆ, ಕಾಣಿಕೆ ಸಮರ್ಪಣಾ ಪ್ರಾರ್ಥನೆ

ಪರಾರ್ಥ ಪ್ರಾರ್ಥನೆ :

ನಾಯಕರು: ಪುನಃಸ್ಥಾಪನಾ ಭಾನುವಾರವನ್ನು ಹಾಗೂ ನಿನ್ನ ಸಾರ್ವಭೌಮತೆ, ನ್ಯಾಯ, ಸಮಾಧಾನವನ್ನು ಆಚರಿಸುವ ಈ ದಿನದಲ್ಲಿ ಅನೇಕ ಸ್ತ್ರೀ-ಪುರುಷರು ಹಾಗೂ ಮಕ್ಕಳನ್ನು ಮೋಸದಿಂದ ಅವರಿಗೆ ತಿಳಿಯದ ಪ್ರದೇಶಗಳಿಗೆ ಅವರ ದಣಿಗಳು ಕೊಂಡೊಯ್ದು ತಮ್ಮ ಆರ್ಥಿಕ ಲಾಭಕ್ಕಾಗಿ ಒತ್ತಾಯಪೂರ್ವಕವಾಗಿ ವೇಶ್ಯಾವಾಟಿಕೆಗೂ ಇನ್ನಿತರೆ ದುಡಿತಕ್ಕೂ ಉಪಯೋಗಿಸುತ್ತಿರುವುದನ್ನು ಕೇಳಿಸಿಕೊಳ್ಳುವಲ್ಲಿ ನಮ್ಮ ಹೃದಯಗಳು ನೋವಿಗೊಳಗಾಗಿವೆ. ಗುಲಾಮಗಿರಿಯಂಥ ಅವಮಾನಕರ ಪದ್ಧತಿಯ ವಿರುದ್ಧ ಸ್ವರವೆತ್ತಿ ಕರ್ತನೇ, ಕರುಣಿಸೆಂದು ಪ್ರಾರ್ಥಿಸುತ್ತೇವೆ.

ಸಭೆ: ನಮ್ಮ ಪ್ರಾರ್ಥನೆಯನ್ನು ಕೇಳು.

ನಾಯಕರು: ಗುಲಾಮಗಿರಿಗೊಳಗಾದವರನ್ನು ಹಿಡಿದಿಟ್ಟುಕೊಂಡವರ ಮುಷ್ಟಿಯಿಂದ ಅವರನ್ನು ವಿಮುಕ್ತಗೊಳಿಸು. ಅವರನ್ನು ಬಿಡಿಸಿಕೊಳ್ಳಲು ಪ್ರಯತ್ನಿಸುವವರು ಕತ್ತಲಲ್ಲಿರುವವರಿಗೆ ಬೆಳಕನ್ನು ನೀಡಲು ಪ್ರಯತ್ನಿಸುತ್ತಿರುವಲ್ಲಿ ಅವರನ್ನು ಸಂರಕ್ಷಿಸೆಂದು ಕರ್ತನೇ, ನಿನ್ನಲ್ಲಿ ಪ್ರಾರ್ಥಿಸುತ್ತೇವೆ.

ಸಭೆ: ನಮ್ಮ ಪ್ರಾರ್ಥನೆಯನ್ನು ಕೇಳು.

ನಾಯಕರು: ಕೃಪಾಳು ದೇವರೇ, ಬದುಕುಳಿದವರು ತಮಗೆ ದೊರಕಿದ ನೂತನವಾದ ಸ್ವತಂತ್ರಜೀವಿತಕ್ಕೆ ತಮ್ಮನ್ನು ಅಳವಡಿಸಿಕೊಳ್ಳುವಲ್ಲಿ ಅವರಿಗೆ ಸಹಾಯ ನೀಡೆಂದು ಪ್ರಾರ್ಥಿಸುತ್ತೇವೆ. ನಮ್ಮ ಮುರಿಯಲ್ಪಟ್ಟ ಜೀವಿತದಲ್ಲಿ ನಮ್ಮನ್ನು ಸರಿಪಡಿಸಲು ಶಕ್ತನಾದ ದೇವರೇ, ನಿನಗೆ ಸ್ತೋತ್ರವೆನ್ನುತ್ತಾ ಪ್ರಾರ್ಥಿಸುತ್ತೇವೆ.

ಸಭೆ: ನಮ್ಮ ಪ್ರಾರ್ಥನೆಯನ್ನು ಕೇಳು.

ನಾಯಕರು: ಯಾರು ಇತರರನ್ನು ಹಿಂಸಿಸುತ್ತಾರೋ ಅವರೇ ತಮ್ಮ ಕೃತ್ಯಗಳಿಗೆ ಜವಾಬ್ದಾರರಾಗುವಂತೆ ಅಪರಾಧಿಗಳಿಗೆ ತೀರ್ಪುನೀಡುವವರಿಗೆ ನಿನ್ನ ಜ್ಞಾನವನ್ನು ನೀಡೆಂದು ಪ್ರಾರ್ಥಿಸುತ್ತೇವೆ.

ಸಭೆ: ನಮ್ಮ ಪ್ರಾರ್ಥನೆಯನ್ನು ಕೇಳು.

ನಾಯಕರು: ಸರ್ವಶಕ್ತನಾದ ದೇವರೇ, ನ್ಯಾಯ ವ್ಯವಸ್ಥೆಯನ್ನು ಸುಧಾರಣೆಮಾಡಲಶಕ್ತರಾದ ಪ್ರಪಂಚದ ಎಲ್ಲಾ ನಾಯಕರಿಗಾಗಿ ಅಧಿಕಾರಿಗಳಿಗಾಗಿ ನಿನ್ನಲ್ಲಿ ಪ್ರಾರ್ಥಿಸುತ್ತೇವೆ. ಮುಂದಿನ ದಿನಗಳಲ್ಲಿ ಎಲ್ಲಾ ಜನರಿಗೆ ಹಕ್ಕು

ಮತ್ತು ಮಾನವ ಗೌರವಗಳ ಭರವಸೆ ದೊರೆಯುವಂತಾಗಲಿ. ಹಿಂಸೆ ಮತ್ತು ನಿಂದನೆಗಳು ಮುಂದೆಂದೂ ನಡೆಯದಂತೆ ನಾಯಕರು ಮತ್ತು ಅಧಿಕಾರಿಗಳು ತಡೆಗಟ್ಟುವವರಾಗುವಂತೆ ಮಾಡೆಂದು ಪ್ರಾರ್ಥಿಸುತ್ತೇವೆ.

ಸಭೆ: ನಮ್ಮ ಕರ್ತನಾದ ಯೇಸು ಕ್ರಿಸ್ತನ ನಿಮಿತ್ತ ನಮ್ಮ ಈ ಬಿನ್ನಹಗಳನ್ನು ಸ್ವೀಕರಿಸೆಂದು ಬೇಡಿಕೊಳ್ಳುತ್ತೇವೆ. ಆಮೆನ್.

ಪ್ರತಿಸ್ಪಂದನಾ ಪ್ರಾರ್ಥನೆ :

ನಾಯಕರು: ತಂದೆಯೇ, ಎಲ್ಲಾ ಮಾನವರು ಏಳಿಗೆಯನ್ನು ಹೊಂದಿ ಜೀವಿಸುವವರಾಗುವ ಹಾಗೆ ಆರಂಭದಿಂದಲೇ ಉದ್ದೇಶಪೂರ್ವಕವಾದ ನಿಯೋಜಿತ ವ್ಯವಸ್ಥೆಯನ್ನು ನೀನು ನೇಮಿಸಿದ್ದೀ.

ಸಭೆ: ನ್ಯಾಯವನ್ನು ಸೃಷ್ಟಿಸಿದಾತನು ನೀನು , ನ್ಯಾಯವನ್ನು ಪ್ರೀತಿಸುವಾತನೂ ನೀನಾಗಿದ್ದೀ.

ನಾಯಕರು: ನಮ್ಮ ದಂಗೆಯೇಳುವ ಸ್ವಭಾವದಿಂದಾಗಿ ದೇವರು ದಯಪಾಲಿಸಿದ ವ್ಯವಸ್ಥಿತ ಕ್ರಮವನ್ನು ಮೀರಿ ಜೀವಿಸಿದ್ದೇವೆಂದು ಒಪ್ಪಿಕೊಳ್ಳುತ್ತೇವೆ.

ಸಭೆ: ತಂದೆಯೇ, ನಮ್ಮನ್ನು ಮನ್ನಿಸು.

ನಾಯಕರು: ಕ್ರಿಸ್ತನಲ್ಲಿ ಸಾಕಾರಗೊಂಡ ದೇವರ ನ್ಯಾಯವೂ ಆತನ ಕರುಣೆಯೂ ಆತನ ಶಿಲುಬೆಯಲ್ಲಿ ಸಂಧಿಸಿದವು. ಬಡವರಿಗೆ ಶುಭವರ್ತಮಾನವನ್ನು ಸಾರುವುದಕ್ಕೂ ಸೆರೆಯಲ್ಲಿರುವವರಿಗೆ ಬಿಡುಗಡೆಯನ್ನು ನೀಡುವುದಕ್ಕೂ ಶೋಷಿತರನ್ನು ವಿಮೋಚಿಸುವುದಕ್ಕೂ ನೀನು ಈ ಲೋಕಕ್ಕೆ ಬಂದಿ.

ಸಭೆ: ನೀನು ನಮ್ಮನ್ನು ವಿಮೋಚಿಸಿರುವುದಕ್ಕಾಗಿ ತಂದೆಯೇ, ನಿನಗೆ ಸ್ತೋತ್ರವಾಗಲಿ. ನಿರೀಕ್ಷೆಯನ್ನೂ ಸ್ವತಂತ್ರವನ್ನೂ ನೀನು ಮಾತ್ರ ಕೊಡಲು ಶಕ್ತನಾದುದರಿಂದ ನಿನ್ನನ್ನು ವಂದಿಸಿ ಕೊಂಡಾಡುತ್ತೇವೆ. ನಿನ್ನ ಹೆಸರಿನಲ್ಲಿ ನಾವು ಬಂಧನದ ಎಲ್ಲಾ ನೊಗವನ್ನು ಮುರಿಯುವುದಕ್ಕೂ ದುಷ್ಟತನದ ಎಲ್ಲಾ ಬಂಧಗಳನ್ನು ಬಿಚ್ಚುವುದಕ್ಕೂ ಶೋಷಣೆಗೊಳಗಾದವರನ್ನು ಬಿಡಿಸುವುದಕ್ಕೂ ಸಹಾಯಿಸೆಂದು ಪ್ರಾರ್ಥಿಸುತ್ತೇವೆ. ನ್ಯಾಯವ್ಯವಸ್ಥೆಯನ್ನು ಬಲಗೊಳಿಸು, ಅಧಿಕಾರದಲ್ಲಿರುವ ದುಷ್ಟರನ್ನು ತೆಗೆದುಹಾಕು. ರಕ್ಷಣಾರಹಿತ ಜನರ ಪರವಾಗಿ ಮಾತಾಡುವ ನಾಯಕರನ್ನೆಬ್ಬಿಸು. ನಮ್ಮ ಎಲ್ಲಾ ಕಾರ್ಯಕ್ರಮಗಳನ್ನು ನಿನ್ನ ಹಸ್ತಕ್ಕೆ ಒಪ್ಪಿಸುತ್ತೇವೆ. ನಿನ್ನ ಹೃದಯವು ತಳ್ಳಳ್ಳಪಟ್ಟ ಜನರಿಗಾಗಿ ಕಣ್ಣೀರಿಡುತ್ತದೆಂದು ನಾವರಿತಿದ್ದೇವೆ. ನಿನ್ನ ಹೃದಯಕ್ಕೆ ದುಃಖಭಾರವನ್ನು ತರುವಂಥದ್ದು ನಮ್ಮ ಹೃದಯಕ್ಕೂ ತರುವಂತಾಗಲಿ ಮತ್ತು ನಮ್ಮಲ್ಲಿ ಪ್ರೀತಿಯನ್ನು ಹೆಚ್ಚಿಸು. ನಮ್ಮಲ್ಲಿ ಕಹಿ ಮತ್ತು ತಿರಸ್ಕಾರಗಳಿದ್ದಾಗ್ಯೂ ನಮ್ಮ ಮೇಲಿನ ನಿನ್ನ ಪ್ರೀತಿ ಎಂದಿಗೂ ನಿಂತುಹೋಗಲಿಲ್ಲ. ನೀನು ನಮ್ಮ ಮೇಲೆ ಸುರಿಸಿದ ನಿನ್ನ ಕೃಪೆಯನ್ನು ನೆನಸಿ ನಾವೂ ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಇತರರಿಗೆ ತೊಂದರೆಯನ್ನು ಉಂಟುಮಾಡುವವರ ಕಡೆಗೆ ತೋರಿಸುವವರಾಗುವಂತೆ ನಮ್ಮನ್ನು ಬಲಪಡಿಸು. ನಮ್ಮ ವಿಶ್ವಾಸವನ್ನು ಹೆಚ್ಚಿಸು, ಕಠಿಣಹೃದಯಿಗಳನ್ನು ಮೃದುಗೊಳಿಸು. ಕೊರತೆಯಲ್ಲಿರುವವರನ್ನು ನಾವು ಮರೆಯದಂತೆ ಮಾಡು. ಬಡವರ ನಿರೀಕ್ಷೆ ಭಂಗವಾಗದಿರಲಿ. ನಿನ್ನ ಸಮಾಧಾನದ ಕಾಲುವೆಗಳು ನಾವಾಗುವಂತೆ ಮಾಡು. ನಿನ್ನ ಮಹಿಮಾಪ್ರಭಾವವು ಲೋಕದಲ್ಲೆಲ್ಲಾ ತುಂಬಿಕೊಳ್ಳಲಿ. ಆಮೆನ್.

ಆಶೀರ್ವಚನ

ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯೂ ತಂದೆಯಾದ ದೇವರ ಪ್ರೀತಿಯೂ ಪವಿತ್ರಾತ್ಮನ ಅನ್ಯೋನ್ಯತೆಯೂ ನಿಮ್ಮೆಲ್ಲರ ಸಂಗಡವಿರಲಿ. ಆಮೆನ್.

(ಇಲ್ಲಿಂದ ರೊಟ್ಟಿ ಮುರಿಯುವ ಆರಾಧನೆ ಮುಂದುವರೆಯಬಹುದು)